42

# ಭಿನ್ನಾಭಿಪ್ರಾಯಗಳು ಉಂಟಾಗುವಾಗ ಭ್ರಾಂತಿಗೊಳ್ಳದಿರು

# (15:1-18)

ನಾನು ಭಿನ್ನಾಭಿಪ್ರಾಯಗಳನ್ನು ಇಷ್ಟ ಪಡುವದಿಲ್ಲ. ವಾದ ವಿವಾದವನ್ನಾಗಲೀ ಮತ್ತು ಏರು ಧನಿಯನ್ನಾಗಲಿ ನಾನು ಇಷ್ಟ ಪಡುವದಿಲ್ಲ. ಒಬ್ಬನು ಇನ್ನೊಬ್ಬನ ಕುರಿತು ಅಸಂತೋಷವಾಗುವುದನ್ನು ಕೂಡ ನಾನು ತಾಳಲಾರೆ. ಕೆಲವು ಆತ್ಮಗಳಿಂದ ಉದ್ಭವಿಸುವ ಕೆಟ್ಟತನವನ್ನು ಹಾಗೂ ಸಣ್ಣತನವನ್ನು ನಾನು ನಿರಾಕರಿಸುವೆನು. ಭಿನ್ನಾಭಿಪ್ರಾಯವು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಆದಾಗ್ಯೂ, ಭಿನ್ನಾಭಿಪ್ರಾಯವು ಜೀವಿತದಲ್ಲಿ ಉಂಟಾಗುವ ಕಾರ್ಯವಾಗಿರುತ್ತದೆ - ಮತ್ತು ದೇವಜನರಲ್ಲಿಯೂ ಉದ್ಭವಿಸುತ್ತದೆ (ಮತ್ತಾಯ 10:34-36; ಲೂಕ 12:51-53; 1 ಕೊರಿಂಥ 11:18, 19). ಅಪೊಸ್ತಲರ ಕೃತ್ಯಗಳು 15ರಲ್ಲಿ ಸಭೆಯಲ್ಲಿ ಉಂಟಾದ ಎರಡು ವಿಶೇಷ ಭಿನ್ನಾಭಿಪ್ರಾಯಗಳನ್ನು ಗಮನಿಸುತ್ತೇವೆ: ವಚನ 1 ರಿಂದ 35 ರವರೆಗೆ ಸಿದ್ಧಾಂತದ ಕುರಿತ ಭಿನ್ನಾಭಿಪ್ರಾಯವನ್ನು; 36ರಿಂದ 41ರವರೆಗೆ, ವ್ಯತ್ಯಾಸವುಳ್ಳ ಅಭಿಪ್ರಾಯಗಳನ್ನು ನಾವು ನೋಡುತ್ತೇವೆ. ಮೊದಲನೆಯ ಭಿನ್ನಾಭಿಪ್ರಾಯ ಸಭೆಗೆ ಸಂಬಂಧ ಪಟ್ಟದ್ದು;[1] ಎರಡನೆಯದು ಇಬ್ಬರು ಕ್ರೈಸ್ತರ ನಡುವೆ ಉಂಟಾಗಿದ್ದು. "ಸಭೆಯಲ್ಲಿ ಭಿನ್ನಾಭಿಪ್ರಾಯ ಉಂಟಾಗ ಬಹುದೇ?" ಎಂಬ ಪ್ರಶ್ನೆಯಾಗಿರದೆ, "ಅದು ಸಂಭವಿಸುವಾಗ, ಅದನ್ನು ಹೇಗೆ ಪರಿಹಾರ ಮಾಡುವೆವು?" ಎಂಬುಂದೆ ಪ್ರಶ್ನೆಯಾಗಿರುತ್ತದೆ.

ನಮ್ಮ ಹಿಂದಿನ ಪಾಠದಲ್ಲಿ 15:1-31ರ ಅಪಾಯದ ವಿಚಾರವನ್ನು ನಾವು ಚರ್ಚಿಸಿದೆವು. ಈ ಪಾಠದಲ್ಲೂ ಮತ್ತು ಮುಂದಿನದರಲ್ಲೂ ಸಭೆಗಳಲ್ಲಿ ಉಂಟಾದ ಭಿನ್ನಾಭಿಪ್ರಾಯವನ್ನು ಪೌಲ ಮತ್ತು ಇತರರು ಬಗ್ಗೆ ಹರಿಸಿದ ಕಾರ್ಯವನ್ನು ನೋಡುತ್ತೇವೆ.[2] ನಂತರ 15ರ ಕಡೇ ವಚನವನ್ನು ನೋಡಿ, ಇಬ್ಬರು ಕ್ರೈಸ್ತರ ನಡುವೆ ಉಂಟಾದ ಗೊಂದಲವನ್ನು ಪರಿಹರಿಸಿದ ವಿಷಯವನ್ನು ಚರ್ಚಿಸೋಣ.

### ಅದು ತನಗೆ ತಾನೇ ಪರಿಹಾರವಾಗುವದೋ? (15:1, 2)

ಕೆಲವರು, ಭಿನ್ನಾಭಿಪ್ರಾಯಗಳನ್ನು "ಉದಾಸೀನ" ಮಾಡುವ ಮೂಲಕ ಪರಿಹರಿಸುತ್ತಾರೆ, ಅಥವಾ ಭಿನ್ನಾಭಿಪ್ರಾಯಗಳು ಉದ್ಭವಿಸಲೇ ಇಲ್ಲವೆಂದು ಹೇಳುವರು. ಸಲಹೆಗಾರರು ಇದನ್ನು "ಹಿಂತೆಗೆದುಕೊಳ್ಳುವ ಕ್ರಮ" ಎಂದು ಹೇಳುವರು. ಈ ಕ್ರಮವನ್ನು ಪಾಲಿಸುವವನು, ಯಾವುದೇ ವಿಧವಾದ ಗೌರವವನ್ನಾಗಲೀ ಪಡೆಯುವದು ಅಸಾಧ್ಯ. ಈ ವಿಷಯವು ಗೊಂದಲವನ್ನು ಶಮಾನ ಮಾಡುವದು, ವಿರಳ ಯೆರೂಸಲೇಮಿನಿಂದ ಸುಳ್ಳು ಪ್ರವಾದಿಗಳು ಬಂದಾಗ (ವಚನ 1), ಪೌಲ ಬಾರ್ನಬರು ಅವರ ಅಭಿಪ್ರಾಯವನ್ನು ಉದಾಸೀನ ಮಾಡದೆ, ಅದನ್ನು ಬಗೆಹರಿಸಲು ಮುಂದಾದರು (ವಚನ 2). ಸಭೆಯಲ್ಲಾಗುವ ಭಿನ್ನಾಭಿಪ್ರಾಯಗಳನ್ನು ಬೇಗನೆ ಅಥವಾ ನಂತರವಾದರೂ ಪರಿಹರಿಸಲೇಬೇಕು.[3]

ಕೆಲವರು ಆ ಸಮಸ್ಯೆಯಿಂದ ಹಿಂಜರಿಯುವ ಅತಿ ಸೂಕ್ಷ್ಮವಾದ ಕಾರ್ಯವನ್ನು ಮಾಡುತ್ತಾರೆ, ಸಮಸ್ಯೆ ಇರುವ ಸಭೆಯಿಂದ ಕೆಲವರು ಹಿಂಜರಿದು ಹೋಗುವ ನಿರ್ಧಾರ ಮಾಡುತ್ತಾರೆ. "ನನ್ನ ಸಭೆಯಲ್ಲಿ ಸಮಸ್ಯೆ ಉಂಟಾದಾಗ" ಸಭೆಯ ಅನೇಕ ಸದಸ್ಯರು ಸಭೆಗೆ

ಹೋಗುವದನ್ನೇ ಬಿಟ್ಟು ಬಿಟ್ಟಿದ್ದರು. "ಆದರೆ ಅಂತಿಯೋಕ್ಯ ಸಭೆಯಲ್ಲಿನ ಜನರಲ್ಲಿ ಆ ಸಭೆಯಲ್ಲಿ ಗೊಂದಲಗಳು ಇರುವದರಿಂದ, ನಾನು ಸಭೆಯನ್ನು ಬಿಟ್ಟು ಹೋಗುತ್ತೇನೆ!" ಎಂದು ಯಾರೂ ಸಹ ಹೇಳಲಿಲ್ಲ ಎಂಬ ಸೂಚನೆಯನ್ನು ನೋಡುತ್ತೇವೆ. ಸಭೆಯ ಭಿನ್ನಾಭಿಪ್ರಾಯಗಳನ್ನು ಶಮನ ಮಾಡುವ ಮೊದಲು, ಭಿನ್ನಾಭಿಪ್ರಾಯಗಳ ಕುರಿತು ನಮ್ಮಲ್ಲಿರುವ ಮನೋಭಾವದ ಕುರಿತು ಆಲೋಚಿಸೋಣ. ಸಮಸ್ಯೆಗಳನ್ನು ಯಾರೂ ಇಷ್ಟ ಪಡುವದಿಲ್ಲ,[4] ಆದರೆ ಅದು ನಮ್ಮ ಸಭೆಗಳಲ್ಲಿ ಉದ್ಭವಿಸುವಾಗ ನಾವು ಅದನ್ನು ಪರಿಹರಿಸಲು ಸಹಕರಿಸಬೇಕೇ, ವಿನಃ ಅದರಿಂದ ತಪ್ಪಿಸಿಕೊಳ್ಳಬಾರದು.

## ಅದಕ್ಕಾಗಿ ಹೋರಾಡುವದು ವ್ಯರ್ಥವೇ? (15:2)

ಸಭೆಯ ಭಿನ್ನಾಭಿಪ್ರಾಯಗಳಿಗೆ ಸ್ಪಂದಿಸುವಾಗ, ಆ ಭಿನ್ನಾಭಿಪ್ರಾಯದಲ್ಲಿರುವ ಸ್ವಭಾವವನ್ನು ತಿಳುಕೊಳ್ಳಬೇಕು. ಅದು ಸಿದ್ಧಾಂತದ ಕುರಿತ ಗೊಂದಲವೇ? (ಅಪೊಸ್ತಲರ ಕೃತ್ಯಗಳು 15ರಲ್ಲಿರುವಂತೆ), ಅಥವಾ ಒಬ್ಬರ ವ್ಯಯಕ್ತಿಕ ವ್ಯಥೆಯ ಬಗ್ಗೆ ಮಾತನಾಡುತ್ತಿರುವೆವೇ (ಅಪೊಸ್ತಲರ ಕೃತ್ಯಗಳು 6ರಂತೆ)? ಸಭೆಗಳಲ್ಲಿ ಸಿದ್ಧಾಂತದ ವಾದಗಳು ಅಪರೂಪವಾಗಿದ್ದರು, ಆಗಾಗ್ಗೆ ಅವುಗಳು ನಡೆಯುತ್ತಿರುತ್ತವೆ. ಆಗ ಯೂದನ ಎಚ್ಚರಿಕೆಯ ಮಾತುಗಳು ಅಗತ್ಯವಾಗಿರುತ್ತದೆ: "ದೇವಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳಿರಿ" (ಯೂದ 3). ಈ ಕಾರಣದಿಂದ, "ಅವರಿಗೂ ಪೌಲ ಬಾರ್ನಬರಿಗೂ ಭೇದವೂ, ಮಹಾವಾದ ವಿವಾದವೂ ಉಂಟಾದವು" (ಅಪೊಸ್ತಲರ ಕೃತ್ಯಗಳು 15:2).

ಹೇಗೂ ನಾನು ಸಲಹೆ ನೀಡಲು ಹೋದ ಕೆಲವು ಸಭೆಗಳಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು, ನಿಯಮಗಳ ಕುರಿತು ಉಂಟಾಗದೆ, ವ್ಯಕ್ತಿಗತವಾದ ಭಿನ್ನಾಭಿಪ್ರಾಯಗಳಾಗಿದ್ದವು. ಕಾರ್ಯಗಳು ಯಾವ ಕ್ರಮದಲ್ಲಿ ನಡೆಯಬೇಕು ಎಂಬ ವಿಷಯದಲ್ಲಿ ವಾದಗಳು ತಲೆದೋರುತ್ತವೆ. ಕೆಲವು ಸಾರಿ ತನ್ನನ್ನು (ತಪ್ಪಾಗಿ ಅಥವಾ ಸರಿಯಾಗಿ) ಸರಿಯಾದ ವಿಧದಲ್ಲಿ ನಡೆಸಿಕೊಳ್ಳಲಿಲ್ಲವೆಂಬುದಾಗಿದೆಯೆಂದು ಕೆಲವರು ಆಲೋಚಿಸುತ್ತಾರೆ. ಇವುಗಳನ್ನು, ವಾಕ್ಯದ ಮೂಲಕ ಪರಿಹರಿಸಿಕೊಳ್ಳುವಾಗ[5] ಇದರಲ್ಲಿ ಕೆಲವು ಜನರು ಮಾತ್ರ ಸೇರಿಕೊಂಡಿರುತ್ತಾರೆ; ಆದರೆ ವಾದ ಮಾಡುವಂತ ಜನರ ಕಡೆಯಲ್ಲಿ ಸಭೆಯಲ್ಲಿನ ಅಧಿಕ ಜನರು ಸೇರಿಕೊಂಡಿರುತ್ತಾರೆ. ಸಭೆಗಳಲ್ಲಿ ಉಂಟಾಗುವ ವಿವಾಧಗಳಲ್ಲಿ ಸೇರಿಕೊಂಡು ಗೊಂದಲವುಂಟುಮಾಡುವವರು. ದೇವರು ದ್ವೇಷಿಸುವ ಪಟ್ಟಿಯಲ್ಲಿರುವ ಸಂಗತಿಯನ್ನು ನೆನಪು ಮಾಡಿಕೊಳ್ಳಬೇಕು. ಅದೇನೆಂದರೆ "ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು" (ಜ್ಞಾನೋಕ್ತಿ 6:16, 19).[6]

ಒಂದು ವೇಳೆ ಪ್ರಮುಖವಾದ ಸಿದ್ಧಾಂತದ ನಿಯಮಗಳ ಕುರಿತಾಗಿದ್ದರೆ, ನಾವು ಪೌಲನ ನಿದರ್ಶನವನ್ನು ಅನುಸರಿಸಬೇಕೆ ವಿನಃ ಅವುಗಳಿಗೆ ನಾವು ಒಂದು ಗಳಿಗೆ ಹೊತ್ತಾದರೂ ಸಮ್ಮತಿಸಬಾರದು (ಗಲಾತ್ಯ 2:5). ಇನ್ನೊಂದು ವಿಧದಲ್ಲಿ, ಒಬ್ಬರಿಗೆ ಮನನೋಯುವಂತ ಅಥವಾ ಬುದ್ದಿವಾದ ಹೇಳುವಂತ ಅಭಿಪ್ರಾಯ ಉಂಟಾಗಿದ್ದರೆ, "ಆದುದರಿಂದ ನಾವು ಸಮಾಧಾನಕ್ಕೂ ಪರಸ್ಪರ ಭಕ್ತಿವೃದ್ಧಿಗೂ ಅನುಕೂಲವಾಗಿರುವವುಗಳನ್ನು ಸಾಧಿಸಿಕೊಳ್ಳೋಣ" (ರೋಮಾಪುರ 14:19). ನಮ್ಮಲ್ಲಿರುವ ಅಹಂನ್ನು ಬಿಟ್ಟು ಇತರರ ಬುದ್ದಿವಾದಕ್ಕು ಒಳಗಾಗಬೇಕು. ನಮ್ಮ ಅಭಿಪ್ರಾಯ ಹಾಗೂ ಯೋಚನೆಗಳಿಗಿಂತಲೂ, ಸಭೆಯ ಸಮಾಧಾನ ಐಕಮತ್ಯ ಪ್ರಮುಖವಾಗಿರುತ್ತದೆ. (ಅಪೊಸ್ತಲರ ಕೃತ್ಯಗಳು 20:28) ಏಕೆಂದರೆ ಸಭೆಗಾಗಿ ಕ್ರಿಸ್ತನು ಮರಣವನ್ನು ಹೊಂದಿದ್ದಾನೆ.

## ಸಹಾಯವನ್ನು ಕೋರುವದು ವಿಹಿತವೇ? (15:2)

ಅಂತಿಯೋಕ್ಯ ಸಭೆಯಲ್ಲಿ ಭಿನ್ನಾಭಿಪ್ರಾಯ ಉಂಟಾಗುವಾಗ, "ಇದರ ವಿಷಯವಾಗಿ ಸಹೋದರರು ಪೌಲ ಬಾರ್ನಬರನ್ನು ತಮ್ಮಲ್ಲಿ ಬೇರೆ ಕೆಲವರನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರ ಮತ್ತು ಸಭೆಯ ಹಿರಿಯರ ಬಳಿಗೆ ಹೋಗಬೇಕೆಂದು ನೇಮಿಸಿದರು" (ವಚನ 2). ಈ ಸನ್ನಿವೇಶವು ಶಾಸ್ತ್ರದ ನಿಯಮಗಳನ್ನು ಮತ್ತು ಪ್ರೇರಿತರಾದ ಮನುಷ್ಯರನ್ನು (ಅಪೊಸ್ತಲರು) ಒಳಗೊಂಡಿತ್ತು. ಅಂತಿಯೋಕ್ಯದ ಸಹೋದರರು ಯೆರೂಸಲೇಮಿನಲ್ಲಿದ್ದ ಅಪೊಸ್ತಲರ ಸಲಹೆಯನ್ನು ಬಯಸಿದರು ಏಕೆಂದರೆ ಅವರು ಹೊಸ ಒಡಂಬಡಿಕೆಗೆ ಸಮಾನರಾಗಿದ್ದರು. ಹೇಗೂ, ಈ ವಾಕ್ಯ ಭಾಗದಿಂದ ಸಮಾನ್ಯವಾದ ನಿಯಮವನ್ನು ನಾನು ತಿಳಿಸುತ್ತಿರುವದಿಲ್ಲ: ಯಾಕಂದರೆ ಸ್ಥಳೀಯ ಸಭೆಗಳು ತಮ್ಮದೇ ಆದ ಅಡಳಿತವನ್ನು ಹೊಂದಿರುತ್ತವೆ,[7] ಕೆಲವು ಸಾರಿ ಇತರೇ ಸಭೆಯ ನಾಯಕರನ್ನು ಸಹಾಯಕ್ಕಾಗಿ ಕರೆತರುವದು ಯೋಗ್ಯವಾಗಿರುತ್ತದೆ ಮತ್ತು ಸಮಯೋಚಿತವಾಗಿರುತ್ತದೆ.

ಸಮಾನ್ಯವಾಗಿ, ದೇವ ಭಕ್ತರ ಸಲಹೆಯನ್ನು ಪಡದು ಅವರ ತಿರ್ಮಾನವನ್ನು ಗೌರವಿಸಬೇಕಾದರೆ ಈ ಕಾರ್ಯವನ್ನು ಪರೋಕ್ಷವಾಗಿ ಮಾಡಬೇಕು. ನಾನು ಆಸ್ಟ್ರೇಲಿಯದಲ್ಲಿರುವಾಗ ನನ್ನ ಸಹೋದರನೊಂದಿಗೆ ಮಾಡಬೇಕಾದ ಕಾರ್ಯವನ್ನು ಕುರಿತು ನಮ್ಮನ್ನು ಸಂಧಿಸಲು ಬರುತ್ತಿದ್ದ ಇನ್ನೊಬ್ಬ ಸಹೋದರನ ಸಲಹೆಯನ್ನು ಆ ಸಂದರ್ಭಕ್ಕನುಗುಣವಾಗಿ ನೇರವಾಗಿ ಪಡೆದೆವು. ಸಭಾಕೂಟಗಳಲ್ಲಿ ಇತರೇ ಸಭೆಯಿಂದ ಬಂದ ಗೌರವಾನ್ವಿತ ಸಹೋದರನು ನಮ್ಮಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ಬಗೆ ಹರಿಸಿದ್ದನ್ನು ನಾನು ನೋಡಿದ್ದೇನೆ. ಸಂದರ್ಶಿಸುವ ಸಹೋದರನು ತನಗೆ ಅಧಿಕಾರ ಇಲ್ಲದೆಯಿದ್ದರೂ, ಆ ಪರಿಸ್ಥಿತಿಯಲ್ಲಿ ಭಿನ್ನಾಭಿಪ್ರಾಯಗಳಲ್ಲಿ ಸೇರಿರುವವರಿಗಿಂತಲೂ ಅವನು ಉತ್ತಮವಾದ ಪರಿಹಾರವನ್ನು ನೀಡಬಹುದು.[8]

ಹೊರಗಿನ ಸಹಾಯವನ್ನು ಪಡೆಯಬೇಕೆ ಅಥವಾ ಪಡೆಯಬಾರದೇ ಎಂಬ ಸಮಯವನ್ನು ನಾನು ಹೇಳಲಾರೆನು. ಸಭೆಯ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ನೀನು ಉತ್ತಮವಾದ ಪ್ರಯತ್ನವನ್ನು ಮಾಡಿದ್ದಾಗ್ಯೂ ಅದನ್ನು ಪರಿಹಾರ ಮಾಡಲು ಸಾದ್ಯವಾಗದೆ ಇದ್ದರೆ ಇನ್ನೊಬ್ಬರ ಸಹಾಯವನ್ನು ಪಡೆಯಲು ಹಿಂಜರಿಯಬಾರರೆಂದು ನಾನು ಸರಳವಾಗಿ ಉತ್ತೇಜಿಸುತ್ತೇನೆ.

ಅಪೊಸ್ತಲರ ಕೃತ್ಯಗಳು 15ರಲ್ಲಿ ಸಭಾಸಂಘಟನೆಯ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಲು ಇತರೆ ಸಭಾಸಂಘಗಳ ಸಹಾಯವನ್ನು ಕೋರಬೇಕೆಂಬ ವಿಚಾರವನ್ನು ಒಂದು ನಿರ್ಣಯವೆಂದು ಹೇಳುತ್ತಿರುವದಿಲ್ಲ. *ಸಂಘ ಸಂಸ್ಥೆಗಳು ತಮ್ಮ ಸಮ್ಮೇಳನಗಳನ್ನು* ಹಾಗೂ ಕೂಡಿ ಬರುವಿಕೆಗಳನ್ನು ಅಪೊಸ್ತಲರ ಕೃತ್ಯಗಳು 15ರ ಪ್ರಕಾರ ನಿರ್ಣಯಿಸುತ್ತಾರೆ. ಕ್ಯಾಥೋಲಿಕ ಸಭೆಯವರು ತಮ್ಮ ಯೆರೂಸಲೇಮಿನ ಸೇಲಿಬರೋಣವನ್ನು "the first Ecumenical Council" ಎಂದು ಕರೆಯುವರು. ಹೇಗೂ, ಅಪೊಸ್ತಲರ ಕೃತ್ಯಗಳು 15ರ ಸನ್ನಿವೇಶವು ಸಭೆಗಳು ತಮ್ಮ ಪ್ರತಿನಿಧಿಗಳನ್ನು ಸಮ್ಮೇಳನಕ್ಕೇ ಕಳುಹಿಸಿ ಸಭಾ ವಿಷಯಗಳ ಕುರಿತು ಮತ ಚಲಾಯಿಸುವದಕ್ಕೇ ನಾವು ಮಾಡಿಕೊಟ್ಟಿರುವದಿಲ್ಲ. ಅದರ ಬದಲಾಗಿ ಒಂದು ಸಭೆಯ ಮನುಷ್ಯರು ಇನ್ನೊಂದು ಸಭೆಗೆ ಹೋದರು. ಸಂಘಸಂಸ್ಥೆಗಳ ಬರಹಗಾರರು ಸಹ ಇದು ಸಭೆಯ ಹೆಚ್ಚಿನ ಸಮ್ಮೇಳನ ಅಥವಾ ಕೂಟವೆಂದು ತಿಳಿದುಕೊಳ್ಳುವದಿಲ್ಲ:

> ಅಲ್ಲಿ ಕೂಡಿಬಂದದ್ದು "ಸಭಾಪರಿಷತ್ತು" ಆಗಿರಲಿಲ್ಲ. ಸಂಘಟನೆಯ ವಿಚಾರದಲ್ಲಿ ಸ್ಥಳೀಯ ಸಭೆಗಳು ಸ್ವ ಆಡಳಿತಕ್ಕೆ ಒಳಪಟ್ಟಿರುತ್ತವೆ.[9]

> ಯೆರೂಸಲೇಮಿನ ಸಮ್ಮೇಳನವು ಸಭೆಯ ಸಮಾನ್ಯ ಸಮ್ಮೇಳನಕ್ಕೆ ಸಂಕೇತವಾಗಿರುವದಿಲ್ಲ. ಇತಿಹಾಸದಲ್ಲಾಗಲಿ, ಅದರ ಆಡಳಿತದಲ್ಲಾಗಲಿ ಅಥವಾ ಅದರ ಧ್ಯೇಯಗಳಿಗೆ ಈ ಸಂಬಂಧವನ್ನು ನೀಡುವದಿಲ್ಲ. ಇದು ನೇಮಕಗೊಂಡ

> ಪ್ರತಿನಿಧಿಗಳ ಸಮ್ಮೇಳನವಾಗಿರದೇ ಅಂತಿಯೋಕ್ಯ ಸಭೆಯಿಂದ ಕಳುಹಿಸಲ್ಪಟ್ಟ ಜನರನ್ನು ಸ್ವೀಕರಿಸುವಂತ ಯೆರೂಸಲೇಮಿನ ಪೂರ್ಣ ಸಭೆಯಾಗಿತ್ತು [10]

## ನಾನು ನನ್ನ ಹೆಮ್ಮೆಯನ್ನು ನುಂಗುವಷ್ಟು ದೊಡ್ಡವನಾಗಿರುವೇನೋ? (15:2, 3)

ಅಹಂಕಾರದ ಕುರಿತು ಈಗಾಗಲೇ ನಾನು ತಿಳಿಸಿರುವೇನು, ಪುನಃ ಈ ಸಲಹೆಯನ್ನು ತಿಳಿಸುವದು ಯೋಗ್ಯವಾಗಿದೆ: ಅಗತ್ಯವಿದ್ದರೆ ನೀನು ನಿನ್ನ ಹೆಮ್ಮೆಯನ್ನು ನುಂಗಿಕೊಳ್ಳುವದು ಯೋಗ್ಯವಾಗಿರುತ್ತದೆ. ಆ ಕಾರ್ಯವನ್ನು ಮಾಡಿದವನ ಕುರಿತು ಒಂದು ನಿದರ್ಶನವನ್ನು ಇಲ್ಲಿ ನೀಡಲಾಗಿದೆ. ಅಂತಿಯೋಕ್ಯ ಸಭೆಯವರು ತಮ್ಮ ಸಮಸ್ಯೆಯ ಕುರಿತು ಯೆರೂಸಲೇಮಿನ ನಾಯಕರ ಸಲಹೆಯನ್ನು ಪಡೆಯಲು ಜನರನ್ನು ಕಳಿಹಿಸುವ ನಿರ್ಣಯವನ್ನು ಮಾಡಿದರು (ವಚನ 2). ಇದು ಪೌಲನಿಗೆ ನಾಚಿಕೆ ಉಂಟುಮಾಡುವ ಕಾರ್ಯವಾಗಿತ್ತು. ಯಾಕಂದರೆ ಈ ವಿಷಯದ ಕುರಿತು ಯೆರೂಸಲೇಮಿನಲ್ಲಿ ಮಾತನಾಡುವಷ್ಟು ಅರ್ಹತೆಯನ್ನು ಹೊಂದಿದ ಅಪೊಸ್ತಲನು ಅವನಾಗಿದ್ದನು. ನಂತರ ಅವನು ಯೆರೂಸಲೇಮಿಗೆ ಹೋದಾಗ, ಮಾನಿಷ್ಟರೇನಿಸಿಕೊಂಡವರು ನನ್ನ ಮಾತಿಗೆ ಒಪ್ಪಿದರೇ ಹೊರತು ನನಗೇನೂ ಕಲಿಸಲಿಲ್ಲ ಅಂದನು (ಗಲಾತ್ಯ 1:17; 2:6). ಹಾಗಿದ್ದರೆ, ಯೆರೂಸಲೇಮಿಗೆ ಹೋಗುವದಕ್ಕೆ ಪೌಲನು ಏಕೆ ಸಮ್ಮತಿಸಿದನು? ಗಲಾತ್ಯ 2:2ರಲ್ಲಿ, "ಅವನು ದೈವ ಪ್ರೇರಣೆಗೆ ಅನುಸಾರವಾಗಿ ಹೋದೇನು." ಯಾವುದು ಒಂದು ಕಾರಣದಿಂದ ಅಥವಾ ಐಕಮತಕ್ಕೋಸ್ಕರವಾಗಿ ಯೆರೂಸಲೇಮಿಗೆ ಆ ಅಪೊಸ್ತಲರನು ಹೋಗಬೇಕೆಂದು ದೇವರು ತಿಳಿಸಿದ್ದನು ಮತ್ತು ಅಂತಿಯೋಕ್ಯದ ಸಹೋದರರು ಸಹ ಅವನಿಗೆ ಕೇಳಿಕೊಂಡಾಗ, ಅದನ್ನು ಪೌಲನು ಮಾಡಿದನು (ಅಪೊಸ್ತಲರ ಕೃತ್ಯಗಳು 15:3). ಒಬ್ಬ ದೊಡ್ಡ ಮನುಷ್ಯನು ಇದನ್ನು ಮಾಡಬೇಕಿತ್ತು. ಜ್ಞಾನೋಕ್ತಿ 16:18 ತಿಳಿಸುವಂತೆ "ಗರ್ವದಿಂದ ಭಂಗ" ಅನೇಕ ಸಾರಿ, ಗರ್ವವು ಸಭೆಯಲ್ಲಿ ನಾಶವನ್ನುಂಟು ಮಾಡುತ್ತದೆ. ಆದ್ದರಿಂದ ಗರ್ವವನ್ನು ನುಂಗಿಕೊಳ್ಳುವಷ್ಟು ದೊಡ್ಡವರಾಗಿರ್ರಿ.

## ಈ ವಿಷಯದ ಕುರಿತು ಮಾತನಾಡಲು ನಾನು ಸಿದ್ಧನಿರುವೆನೋ? (15:3-5)

ಭಿನ್ನಾಭಿಪ್ರಾಯಗಳ ಸಮಯದಲ್ಲಿ "ಅದನ್ನು ತಪ್ಪಿಸಿಕೊಂಡು ಹೋಗುವವನು!" ಕುರಿತು ಒಂದು ವಿಶೇಷ ನಿದರ್ಶನವಿದೆ, ಅವರು ಆ ವಿಷಯದ ಕುರಿತು ಮಾತನಾಡಲು ಹಿಂಜರಿಯುವರು. ಆದರೆ ಪೌಲ ಬಾರ್ನಬರಲ್ಲಿ ಈ ಕೊರತೆ ಇರಲಿಲ್ಲ.

> ಸಭೆಯವರ ಅವರನ್ನು ಸಾಗಕಳುಹಿಸಿದ ಮೇಲೆ[11] ಅವರು ಫೊಯಿನಿಕೆ ಸಮಾರ್ಯ ಸೀಮೆಗಳನ್ನು ಹಾದು ಹೋಗುತ್ತಿರುವಾಗ ಅನ್ಯಜನರು ಕರ್ತನ ಕಡೆಗೆ ತಿರುಗಿಕೊಂಡ ಸಂಗತಿಯನ್ನು ಅಲ್ಲಿದ್ದ ಸಹೋದರರಿಗೆ[12] ವಿವರವಾಗಿ ಹೇಳಿ ಅವರೆಲ್ಲರನ್ನು ಬಹಳವಾಗಿ ಸಂತೋಷಪಡಿಸಿದರು. ಅವರು ಯೆರೂಸಲೇಮಿಗೆ[13] ಬಂದ ಮೇಲೆ ಸಭೆಯವರೂ ಅಪೊಸ್ತಲರೂ ಸಭೆಯ ಹಿರಿಯರೂ[14] ಅವರನ್ನು ಸೇರಿಸಿಕೊಂಡಾಗ ದೇವರು ತಮ್ಮೊಂದಿಗಿದ್ದು ಮಾಡಿದ ಕಾರ್ಯಗಳನ್ನೆಲ್ಲಾ ಅವರಿಗೆ ತಿಳಿಸಿದರು (ವಚನಗಳು 3, 4).

ಪೌಲ ಬಾರ್ನಬರು ತಮ್ಮಲ್ಲಿ ಆದ ಕಾರ್ಯಗಳ ಬಗ್ಗೆ ವರದಿ ನೀಡುವ ಪ್ರತ್ಯಕ್ಷತೆಯ ಸಮ್ಮೇಳನವಾಗಿತ್ತು - ಈ ಸಮಯದಲ್ಲಿ ಮಾತನಾಡಲು ಯೂದಾಯದವರಿಗೆ ಅವಕಾಶ ಕಲ್ಪಿಸಲಾಗಿತ್ತು (ವಚನ 5).

ಸಮಸ್ಯೆಯ ಕುರಿತು ಮಾತನಾಡುವ ಅವಕಾಶವನ್ನು ಪೌಲ ಬಾರ್ನಬರು ಹೊಂದಿದ್ದರು ಗಲಾತ್ಯ 2. ಅಪೊಸ್ತಲರ ಕೃತ್ಯಗಳು 15ರ ವಿಷಯವನ್ನೇ ಹೇಳುವದಾದರೆ, ವಚನ 5ರ ಬಹಿರಂಗ ಕೂಟ ಹಾಗೂ ವಚನ 6 ರಿಂದ 29ರಲ್ಲಿರುವ ಬಹಿರಂಗ ಕೂಟದ ನಡುವೆ,

ಪೌಲ ಬಾರ್ನಬರು ಯೆರೂಸಲೇಮಿನ ಸಭಾ ನಾಯಕರನ್ನು ಪ್ರತ್ಯೇಕವಾಗಿ ಸಂಧಿಸಿದ್ದರು. ಅವರು ಸ್ವತಂತ್ರವಾಗಿ ಮಾತನಾಡಿದ್ದರಿಂದ, ಅವರಲ್ಲಿ ಹೊಂದಾಣಿಕೆಯ ಅಭಿಪ್ರಾಯ ಉಂಟಾಗಿತ್ತು (ಪ್ರೇರಿತರಾದ ಮನುಷ್ಯನು ಸಿದ್ಧಾಂತದ ಕುರಿತು ಮಾತನಾಡುವಾಗ ನಮ್ಮಲ್ಲೂ ಈ ರೀತಿ ಆಗುವಂತೆ). ನಂತರ, "... ಯಾಕೋಬ ಕೇಫ, ಯೋಹಾನರು, ... ಅನ್ಯೋನ್ಯತೆಯ ಬಲಗೈಯನ್ನು ಚಾಚಿದರು ..." (ಗಲಾತ್ಯ 2:9). ಸಭೆಯಲ್ಲಿ ಸಮಾದಾನವನ್ನು ಪುನಸ್ಥಾಪಿಸಲು ಅವರು ಮುಂದಾಗಿದ್ದರು ಯಾಕೆಂದರೆ ಸ್ವತಂತ್ರವಾಗಿ ಮಾತನಾಡಲು ಪೌಲ ಬಾರ್ನಬರು ಚಿತ್ರಿಸಿದ್ದರು.

ಸಕಲ ಸಮಸ್ಯೆಯನ್ನು ಚರ್ಚೆಯ ಮೂಲಕವೇ ಪರಿಹರಿಸಲು ಸಾಧ್ಯ: *ಇಲ್ಲ* ಆದರೆ ಒಂದು ಸಂಗತಿ ದೃಢವಾಗಿದೆ. ವಿವಿಧ ಅಂಶಗಳನ್ನು ಎರಡೂ ಕಡೆಯಿಂದ ಚರ್ಚಿಸಿ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಸಹೋದರನೊಂದಿಗೆ ಭಿನ್ನಾಭಿಪ್ರಾಯವಾಗುವಾಗ, ಅವನೊಂದಿಗೆ ಮುಖಾ ಮುಖಿಯಾಗಿ ಕೂತುಕೊಂಡು ಚರ್ಚಿಸಿ.

## ನಾನು ಆಲಿಸುವದನ್ನು ಕಲಿತಿರುವೆನೋ? (15:6, 7)

ಭಿನ್ನಾಭಿಪ್ರಾಯವನ್ನು ತೃಪ್ತಿಕರವಾಗಿ ಶಮನ ಮಾಡಲು, ಎರಡನೆಯ ಬಹಿರಂಗ ಸಭೆಯನ್ನು ನಡೆಸಲಾಯಿತು: "ಅಪೊಸ್ತಲರೂ ಸಭೆಯ ಹಿರಿಯರೂ ಈ ವಿಷಯವನ್ನು ಕುರಿತು ಆಲೋಚಿಸುವದಕ್ಕೆ ಕೂಡಿ ಬಂದರು" (ವಚನ 6). ತರುವಾಯ, "ಸರ್ವಸಭೆಯೂ" ಸೇರಿ ಬಂದರು (ವಚನ 22; ನೋಡಿರಿ ಸಹ ವಚನ 12). ವಚನ 7ರಲ್ಲಿ "ಬಹು ವಿವಾದವು ನಡೆದ ಮೇಲೆ ಪೇತ್ರನು ಎದ್ದು ನಿಂತು ಅವರಿಗೆ ..." "ಮಾತುಗಳನ್ನಾಡಲು ದುಡುಕಬೇಡಿರಿ" ಅಂದನು.[15] ಪೇತ್ರನ ಅಧಿಕೃತ ಮಾತುಗಳಿಗಿಂತ ಮೊದಲು, ಪೌಲ, ಬಾರ್ನಬ ಹಾಗೂ ಯಾಕೋಬ ಇವರೆಲ್ಲರೂ ಮಾತನಾಡುವ ಅವಕಾಶವನ್ನು ಹೊಂದಿದ್ದರು. ಭಿನ್ನಾಭಿಪ್ರಾಯ ವ್ಯಕ್ತಿಪಡಿಸುವವರ ಸಂಗಡ ದೈಹೀಕ ಹೋರಾಟವು ಐಕಮತ್ಯವನ್ನು ತರುವದಿಲ್ಲ. ಪ್ರತಿಯೊಬ್ಬನ ಮನಸ್ಸಿನಲ್ಲಿರುವದನ್ನು ತಿಳಿಸಲು ಅವಕಾಶ ನೀಡಿರಿ - *"ಪ್ರತಿಯೊಬ್ಬನು ಮಾತನಾಡಬಹುದು, ಆದರೆ ಯಾವನೂ ತನ್ನದೇ ಆದ ಮಾರ್ಗವನ್ನು ಹೊಂದಿರಬಾರದು"* ಎಂಬ ತಿಳುವಳಿಕೆಯನ್ನು ಪ್ರತಿಯೊಬ್ಬನೂ ಹೊಂದಿರಲಿ.

ಎಚ್ಚರಿಕೆ ಮಾತುಗಳನ್ನು ಆಲಿಸೋಣ: ಇತರರು ಮಾತನಾಡುವಾಗ, ನಾವು ಆಲಿಸೋಣ. ಒಬ್ಬ ಜ್ಞಾನಿಯ ಮಾತೇನೆಂದರೆ, "ಗಮನಿಸದೆ ಉತ್ತರಕೊಡುವವನು ಮೂರ್ಖನೆಂಬ ಅವಮಾನಕ್ಕೆ ಗುರಿಯಾಗುವನು" (ಜ್ಞಾನೋಕ್ತಿ 18:13). ಇತರರು ಮಾತನಾಡುವಾಗ ಅವರನ್ನು ಆಲಿಸುವ ಬದಲು, ಮುಂದೇನು ಹೇಳಬೇಕೆಂದು ಯೋಚಿಸುತ್ತಿರುತ್ತೇವೆ. "ಆಲಿಸುವದನ್ನು ಕಲಿಯಿರಿ" ನಿಜವಾಗಿಯು ಕೇಳಿರಿ, ಕಿವಿಗಳಿಂದ ಮಾತ್ರವಲ್ಲದೆ, ಹೃದಯದಿಂದಲೂ ಆಲಿಸಿರಿ. ಮನಃ ಶಾಸ್ತ್ರಜ್ಞರು ಹೇಳುವಂತೆ, ಬಟಾಣಿಯನ್ನು ಮಗುವು ಇಷ್ಟ ಪಡದೆ ಇರುವದರಿಂದ, ಅದನ್ನು ಅದು ಉಗುಳುತ್ತದೆ, ಕೆಲವು ಸಾರಿ ತಮ್ಮ ಕೋಪವನ್ನು ತೋರ್ಪಡಿಸಲೂ ಬಟಾಣಿಯನ್ನು ಉಗುಳುತ್ತವೆ. ತಿಳುವಳಿಕೆಯುಳ್ಳವರು ವಿವಿಧ ವ್ಯತ್ಯಾಸಗಳನ್ನು ಹೊಂದಿರುತ್ತಾರೆ. ತಿಳುಕೊಳ್ಳುವ ಜ್ಞಾನದಿಂದ ನೀವು ಆಲಿಸಿದರೆ, ಅಲ್ಲಿ ನಿಜವಾದ ಸಮಸ್ಯೆಯು ಇರದೆ, ಬೇರೆ ಸಮಸ್ಯೆಯೇ ಆಗಿರುತ್ತದೆ.

## ಜನರ ಬದಲಾಗಿ – ಸಮಸ್ಯೆಯ ಬಗ್ಗೆಯೇ ನಾನು ಯೋಚಿಸುವೆನೋ? (15:7-11)

ಪ್ರತಿಯೊಬ್ಬನು ತನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ ನಂತರ, ಪೇತ್ರನು ಎದ್ದು ನಿಂತು ಮಾತನಾಡಿದನು (ವಚನ 7). ಹಿಂದಿನ ಪಾಠದಲ್ಲಿ ಅವನ ಭಾಷಣದ ಕುರಿತು ತಿಳಿಸಿರುವದರಿಂದ, ನಾನು ಅದನ್ನು ಪುನರಾವರ್ತನೆ ಮಾಡುವದಿಲ್ಲ. ಅದನ್ನು ಒಂದು ಕ್ಷಣಕಾಲ ಓದಿರಿ (ವಚನಗಳು 7-11). ತೊಂದರೆ ಕೊಡಲು ಅಂತಿಯೋಕ್ಯಕ್ಕೆ ಹೋದವರ

ಕುರಿತು ಪೇತ್ರನು ಎಷ್ಟು ಸಾರಿ ಮಾತಾಡಿದನು? "ಏನನ್ನೂ ಮಾತನಾಡಲಿಲ್ಲ" ಪೌಲ, ಬಾರ್ನಬ ಹಾಗು ಯಾಕೋಬನ ಕುರಿತಾಗಿ (ವಚನಗಳು 12-29), ಯೂದಾಯದವರ ಕುರಿತು ಅವರು ಎಷ್ಟುಸಾರಿ ಮಾತನಾಡಿದರು? ಅಂತಿಯೋಕ್ಯಕ್ಕೆ ಬರೆದ ಪತ್ರದಲ್ಲಿ [ಯಾರು] "... ನಿಮ್ಮಲ್ಲಿ ಅಸಮಾಧಾನ ಉಂಟುಮಾಡಿದರು ..." (ವಚನ 24) ಎಂದು ಹೇಳಿದರೇ ವಿನಃ ವ್ಯಕ್ತಿಗತ ಹೆಸರನ್ನು ತಿಳಿಸಲಿಲ್ಲ. ಪೇತ್ರ ಪೌಲ, ಬಾರ್ನಬ ಮತ್ತು ಯಾಕೋಬರು ಆ ವಿಷಯದ ಬಗ್ಗೆ ಯೋಚಿಸಿದರೆ ವಿನಃ ವ್ಯಕ್ತಿಗತವಾಗಿ ಯೋಚಿಸಲಿಲ್ಲ. ಹೆಸರಿಸಿ ಮಾತನಾಡುವದು ಒಳ್ಳೆಯದಾದರೂ[16] ಅನೇಕ ಸಾರಿ ಅಪಾಯವನ್ನು ಉಂಟುಮಾಡುತ್ತದೆ. ಅದು ವಾಸ್ತು ವಿಷಯಕ್ಕೆ ತೊಂದರೆ ನೀಡುತ್ತದೆ, ಲೂಕ 16ರಂತೆ ಸಾಗಕೂಡದ ಸೇತುವೆಯನ್ನು ನಿರ್ಮಾಣಮಾಡುತ್ತದೆ. ವಾಕ್ಯದಿಂದ ಕಲಿಯಿರಿ: ನಿಯಮಗಳನ್ನು ಪಾಲಿಸಬೇಕೆ ವಿನಃ ವ್ಯಕ್ತಿಗಳನ್ನಲ್ಲ.

## ನಾನು ಪುಸ್ತಕಕ್ಕೆ ಅಂಟಿಕೊಂಡಿರುವೆನೇ? (15:12-18)

ಪೇತ್ರನ ಮಾತಿನಿಂದ ಸಭೆಯು ಸ್ಥಬ್ದಗೊಂಡಿತು. ನಂತರ ಬಾರ್ನಬ[17] ಮತ್ತು ಸೌಲನು ತಮ್ಮ ಸೇವಾ ಪ್ರಯಾಣದ ಕುರಿತು ವಿವರಿಸಿದರು. ಲೂಕನು ಅವರ ಮಾತುಗಳನ್ನು ದಾಖಲೇ ಮಾಡಿರುವದಿಲ್ಲ; ಯಾಕಂದರೆ ಅಧ್ಯಾಯ 13 ಮತ್ತು 14ರಲ್ಲಿ ಅದರ ಪೂರ್ಣ ವಿವರವನ್ನು ಈಗಾಗಲೇ ನೀಡಿರುವನು. ಪೌಲ ಬಾರ್ನಬರು ದೇವರು ಮಾಡಿದ ಕಾರ್ಯಗಳನ್ನೇ ವಿವರಿಸಿದರು. ಈ ಸಮಯದಲ್ಲಿ ದೇವರು ಮಾಡಿದ "ಸೂಚಕಕಾರ್ಯ ಹಾಗೂ *ಅದ್ಭುತ ಕಾರ್ಯಗಳ* ಕುರಿತು ಮಾತನಾಡಿದರು" (ವಚನ 12; ಒತ್ತಿ ಹೇಳಿದ್ದು ನನ್ನದು). ದೇವರು ಅವರೊಂದಿಗಿರುವನು ಎಂಬುದಕ್ಕೆ ಇದು ಸೂಚನೆಯಾಗಿತ್ತು (ಇಬ್ರಿಯ 2:4) ಅದ್ದರಿಂದ ದೇವರು ಅವರಲ್ಲಿ ಮಾಡಿದ ಅನ್ಯರ ಸೇವೆಯನ್ನು ಸಾಧರಪಡಿಸಿದ್ದನು.

ಅವರೆಲ್ಲರು ಮಾತನಾಡಿದ ನಂಟರ ಯಾಕೋಬನು ಮಾತನಾಡಿದನು - ಅವನು ಯೇಸುವಿನ ಸಹೋದರನಾಗಿದ್ದನು.[18] ಈ ಹಿಂದೆ ಹೇಳಿದ ವಿಷಯವನ್ನೇ ಅವನು ಹೇಳಿ: "ಸಹೋದರರೇ, ನಾನು ಹೇಳುವದನ್ನು ಕೇಳಿರಿ - ದೇವರು ಮೊದಲಲ್ಲಿ ಅನ್ಯಜನರನ್ನು ಕಟಾಕ್ಷಿಸಿನೋಡಿ ತನ್ನ ಹೆಸರಿಗಾಗಿ ಅವರೊಳಗಿಂದ ಒಂದು ಪ್ರಜೆಯನ್ನು ಆರಿಸಿಕೊಂಡ ವಿಧವನ್ನು ಸಿಮೆಯೋನನು[19] ವಿವರಿಸಿದನಷ್ಟೆ" (ವಚನಗಳು 13, 14). ಅವನ ಹೇಳಿಕೆಯ ಕ್ರಮವು ಕೆಲವರಿಗೆ ದಿಗ್ಭ್ರಮೆ ಉಂಟು ಮಾಡಿರಬಹುದು. "ಯೆಹೂದ್ಯರು ಯಾವಾಗಲು ದೇವರಾದುಕೊಂಡ ಜನರಾಗಿದ್ದರು" - ಅದು ಅನ್ಯರಿಗೆ ತದ್ವಿರುದ್ಧವಾಗಿತ್ತು. ಆದರೆ ಈಗ ದೇವರು "ತನ್ನ ಹೆಸರಿಗಾಗಿ *ಅನ್ಯರಿಂದ ಒಂದು ಪ್ರಜೆಯನ್ನು* ಆರಿಸಿಕೊಂಡಿದ್ದನು"! (ಒತ್ತಿ ಹೇಳಿದ್ದು ನನ್ನದು.)

ನಂತರ ಯಾಕೋಬನು ದೇವರ ವಾಕ್ಯವನ್ನು ಹೇಳಿ ಕೊರ್ನೇಲ್ಯನ ಮತ್ತು ಅವನ ಕುಟುಂಬದವರ ಪರಿವರ್ತನೆಯು, ಪ್ರವಾದನೆಯ ನೇರವೇರಿಕೆ ಎಂದು ಹೇಳಿದನು. "ಇದಕ್ಕೆ ಪ್ರವಾದಿಗಳ ಮಾತುಗಳು ಒಪ್ಪುತ್ತವೆ" (ವಚನ 15ಎ) ಎಂದು ಆಮೋಸ 9:11, 12ರ ವಾಕ್ಯವನ್ನು ಹೇಳಿದನು (ವಚನಗಳು 16-18).[20] ಸಭೆಯಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುವಾಗ, ನಾವು ಪುಸ್ತಕಕ್ಕೆ ಹತ್ತಿರವಿರಬೇಕು. ಭಿನ್ನಾಭಿಪ್ರಾಯವು ಸಿದ್ಧಾಂತದ ಕುರಿತು ಇಲ್ಲದೆ ಇರುವಾಗ, ಸತ್ಯವೇದದಲ್ಲಿರುವ ನಿಯಮಗಳು ಸಮಸ್ಯೆಗಳನ್ನು ಪರಿಹರಿಸುತ್ತವೆ. ಮತ್ತು ದೇವರ ಚಿತ್ತದ ನಡುವೆ ನಮ್ಮನ್ನು ಇರಿಸುತ್ತದೆ.

## ಮುಕ್ತಾಯ

ಈ ಪಾಠದ ಆರಂಭದಲ್ಲಿ, ನಾನು ಭಿನ್ನಾಭಿಪ್ರಾಯಗಳನ್ನೇ ಸಹಿಸುವದಿಲ್ಲವೆಂದು ತಿಳಿಸಿದ್ದೆನು. ನಾವು ಈ ಪಾಠವನ್ನು ಅಂತ್ಯಗೊಳಿಸುವಾಗ, ಭಿನ್ನಾಭಿಪ್ರಾಯದ ಕುರಿತು

ನಿಮ್ಮ ಅಭಿಪ್ರಾಯವೇನು? ಎಂಬ ಪ್ರಶ್ನೆಯನ್ನು ಕೇಳುವೆನು. ಸಹೋದರರು *ಒಪ್ಪದೆ* ಇರುವ ವಿಷಯಕ್ಕೆ ನಿಮ್ಮ ಪ್ರತಿಕ್ರಿಯೆ ಏನು? ನೀವು ಸೋಲುವಿರಾ? ಛಿದ್ರ ಛಿದ್ರವಾಗುವಿರಾ? ಅದನ್ನು ಬಿಟ್ಟುಬಿಡುವಿರಾ? ಈ ಪಾಠದಲ್ಲಿ ನೀವು ಏನನ್ನು ಸಾಧಿಸದೆ ಹೋದರೆ, ದೇವರ ಸಹಾಯದಿಂದ ಭಿನ್ನಾಭಿಪ್ರಾಯಗಳನ್ನು ಪರಿಹರಿಸಬಹುದು - ಅದು ದೇವರಿಗೆ ಮಹಿಮೆಯನ್ನು ತರುವಂಥ ರೀತಿಯಲ್ಲಿರುತ್ತದೆ.

## ದೃಶ್ಯ ಸಂಬಂಧವಾದ – ಟಿಪ್ಪಣಿ

ಅಪೊಸ್ತಲರ ಕೃತ್ಯಗಳು 15ರ ಕೂಟವು ಸಂಘಟನೆಯ ಸಮ್ಮೇಳನವಾಗಲಿ ಅಥವಾ ಸಭೆಯಾಗಲಿ ಅಗಿರಲಿಲ್ಲ. ಮುಂದಿನ ಚಿತ್ರದಲ್ಲಿ ಸಂಘಟನೆಯ ಸಮ್ಮೇಳವನ್ನು ತೋರಿಸಲಾಗಿದೆ:




ಈ ಮೇಲಿನಂತೆ ಅಪೊಸ್ತಲರ ಕೃತ್ಯಗಳು 15ರ ಸಭೆಯಲ್ಲಿ (1) ಪ್ರೇರಿತರಲ್ಲದ ಮನುಷ್ಯರು, (2) ಪ್ರತಿನಿಧಿಗಳು, ಮತ್ತು (3) ಅಭಿಪ್ರಾಯಗಳು, ಒಳಗೊಳ್ಳದೆ, (1) ಪ್ರೇರಿತರು, (2) "ಪೂರ್ತಿ ಸಭೆ," ಮತ್ತು (3) ರಕ್ಷಣೆಯ ವಿಷಯವು ಒಳಗೊಂಡಿದ್ದವು. ಅಪೊಸ್ತಲರ ಕೃತ್ಯಗಳು 15ರಲ್ಲಿ ಪ್ರೇರಿತರಿದ್ದವರ ಸಂಗಡ ಸಭೆಯು ಪ್ರಶ್ನೆಗಳನ್ನು ಕಳುಹಿಸಿದ್ದರು.




ರೋಮನ್ ಕ್ಯಾಥೋಲಿಕರ ಸಭೆಗಳ ಸಮ್ಮೇಳನಕ್ಕೂ, ಯೆರೂಸಲೇಮಿನ ಸಭೆಗೂ ವ್ಯತ್ಯಾಸವಿದೆ.

## ಪ್ರಸಂಗದ ಟಿಪ್ಪಣಿ

ವಚನ 6ರಿಂದ 29ರಲ್ಲಿನ ಸಭಾಕೂಟವನ್ನು ಈ ಕೆಳಕಂಡಂತೆ ವಿಂಗಡಣೆ ಮಾಡಬಹುದು: (1) ಪೇತ್ರನ ವಾದ (ವಚನಗಳು 7-11), (2) ಬಾರ್ನಬ ಮತ್ತು ಪೌಲನ ವರದಿ (ವಚನ 12), ಯಾಕೋಬನ ಶಿಫಾರಸು (ವಚನಗಳು 13-29).

ಟಿಪ್ಪಣಿಗಳು

[1]ಈ ಭಿನ್ನಾಭಿಪ್ರಾಯವನ್ನು ಸರಿಯಾದ ರೀತಿಯಲ್ಲಿ ಪರಿಹರಿಸದಿದ್ದರೆ, ಆ ಸಮಸ್ಯೆಯು ಇತರೆ ಸಭೆಗಳಿಗೆ ಹರಡುವ ಸಾಧ್ಯತೆಯಿತ್ತು. [2]ಗಲಾತ್ಯ 2ರಿಂದ, ಕೆಲವು ವಿವರಣೆಯನ್ನು ನೀಡುತ್ತೇನೆ (ಅಥವಾ ಅದರಂತೆ) ಅದೇ ವಿಧದ ಘಟನೆಯು ಇಲ್ಲಿ ನಡೆದಿರುತ್ತದೆ. [3]"ರುಕುಗಳ ಮೂಲಕ ಸಂಗತಿಗಳು ಬಿದ್ದಾಗ" ಎಂಬ ಪಾಠದ ವಿವರಣೆ ಅಪೊಸ್ತಲರ ಕೃತ್ಯಗಳು 2ನೇ ಪುಸ್ತಕದಲ್ಲಿ ನೋಡಿರಿ. ಯೆರೂಸಲೇಮಿನ ಸಭೆಯಲ್ಲಿನ ಸಮಸ್ಯೆಯನ್ನು ಅಪೊಸ್ತಲರು ಪರಿಹರಿಸಿದ ವಿಧವನ್ನು ಗಮನಿಸಿರಿ. [4]ಒಂದು ಅಥವಾ ಎರಡು ವಿನಾಯಿತಿ ಇರಬಹುದು. (ಕೆಲವರು ಸಮಸ್ಯೆಗೆ ಕಾತುರರಾಗಿರುವರು) ಇದು ಸಾಮಾನ್ಯವಾದ ಸತ್ಯದ ಹೇಳಿಕೆ. [5]ಮುಂದಿನ ಪಾಠ ನೋಡಿರಿ. [6]"ದೇವರು ಪಾಪವನ್ನು ದ್ವೇಷಿಸುವನು, ಪಾಪಿಯನ್ನು ಪ್ರೀತಿಸುವನು" ಎಂದು ಹೇಳುತ್ತೇವೆ. ಈ ವ್ಯಾಖ್ಯಾನದಲ್ಲಿ ದೇವರು ವ್ಯಕ್ತಿಯನ್ನು ದ್ವೇಷಿಸುವನು, ಯಾಕೆಂದರೆ ಅವನು ಸಹೋದರರಲ್ಲಿ ಗೊಂದಲ ಉಂಟುಮಾಡುವನು, ಆತ್ಮೀಕವಾಗಿ ತೊಂದರೆ ನೀಡುವವರು ಘೋರವಾದ ಪಾಪವನ್ನು ಮಾಡುತ್ತಾರೆ. [7]ಅಪೊಸ್ತಲರ ಕೃತ್ಯಗಳು 20:28ರ ಮುಂದಿನ ಪುಸ್ತಕವನ್ನು ನೋಡಿರಿ. [8]ಇನ್ನೊಂದು ಹೊರಗಿನಿಂದ ದೊರಕುವ "ನೇರವಾದ" ಸಹಾಯ: ಸಭೆಯನ್ನು ತೊಂದರೆಗೆ ಈಡು ಮಾಡಿದ ವಿಷಯಗಳ ಕುರಿತು: ಸಂದರ್ಭಕ್ಕನುಗುಣವಾಗಿ, ಪ್ರಸಂಗ ಮಾಡಿರಿ ಎಂದು ಕೆಲವು ನಾಯಕರನ್ನು ಆಹ್ವಾನಿಸಿರುವೆನು. ಅದನ್ನು ಪ್ರೀತಿ ವಿಶ್ವಾಸದಿಂದ ಮಾಡುವಾಗ, ಉಕ್ಕುತ್ತಿರುವ ನೀರು ಶಮನವಾಗುತ್ತದೆ. [9]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 461-62. [10]F. W. Farrar, *The Life and Work of St. Paul*, vol. 1 (London: Cassell, Peter, Galpin & Co., 1879), 431, quoted in J. W. McGarvey, *New Commentary on Acts of Apostles*, vol. 2 (Delight, Ark.: Gospel Light Publishing Co., n.d.), 70, n.

[11]"ಅವರು ಕಳುಹಿಸಲ್ಪಟ್ಟರು" ಎಂಬದು ಪ್ರಯಾಣದ ಅಗತ್ಯವನ್ನು ನೀಗಿಸಿದರು ಎಂಬ ಸೂಚನೆಯಾಗಿದೆ. [12]ಫೊಯನಿಕೆ ಹಾಗೂ ಸಮಾರ್ಯದವರು ಅನ್ಯರ ಕುರಿತು ತಾರತಮ್ಯ ಮಾಡಲಿಲ್ಲ, ಆದರೆ ಯೆರೂಸಲೇಮಿನವರು ಮಾಡಿದರು, ಯೆಹೂದ್ಯ ಕ್ರೈಸ್ತರ ಸೇವೆಯ ಪರಿಣಾಮದಿಂದ ಸಭೆಗಳು ಸ್ಥಾಪನೆಗೊಂಡಿದ್ದವು (8:5-25; 11:19). [13]ಮುನ್ನೂರು ಮೈಲಿಗಳ ಪ್ರಯಾಣ, ಅದು ಕಾಲಾವಕಾಶವನ್ನು ತೆಗೆದು ಕೊಂಡಿತ್ತು. [14]ಯೆರೂಸಲೇಮಿನ ನಾಯಕತ್ವವು ಅಪೊಸ್ತಲರ ಸ್ಥಾನದಿಂದ ಹಿರಿಯರ ಸ್ಥಾನಕ್ಕೆ ಮುಂದುವರೆ ದಿರುವದನ್ನು ಗಮನಿಸಿರಿ. ಅಪೊಸ್ತಲರ ಕೃತ್ಯಗಳು 15ರಲ್ಲಿ ಪ್ರತಿನಿರ್ಧಾರವು ಹಿರಿಯರನ್ನು ಒಳಗೊಂಡಿತ್ತು (ವಚನಗಳು 2, 4, 6, 22, 23). [15]"ಚರ್ಚೆ" ಎಂಬುದು ಗ್ರೀಕ್ ಪದ ವಚನ 2. ಕೂಟದಲ್ಲಿ ಗೊಂದಲವಾಗಿತ್ತು. [16]ಪ್ರೇರಿತರಾದ ಬರಹಗಾರರು ವಿರೋಧಿಯ ಹೆಸರನ್ನು ತಿಳಿಸುತ್ತಿದ್ದರು (1 ತಿಮೊಥೆ 1:20; 3 ಯೋಹಾನ 9) ಸುಳ್ಳು ಬೋಧಕರ ಹೆಸರನ್ನು ಕೆಲವು ಸಾರಿ ತಿಳಸಬೇಕಾಗುತ್ತದೆ, ಹೇಗೂ ಪರಿಶುದ್ಧಾತ್ಮಾನು ಅದನ್ನು ಮಾಡುವ ಸರಿಯಾದ ಸಮಯವನ್ನು ತಿಳಿಸಿದ್ದನು. ನಾನು ಹೆಸರಿಸುವದನ್ನು ಮಾಡುವದಿಲ್ಲ. [17]ಯೆರೂಸಲೇಮಿನಲ್ಲಿ ಬಾರ್ನಬನು ಪ್ರಖ್ಯಾತನಾಗಿದ್ದರಿಂದ, ಲೂಕನು ಅವನ ಹೆಸರನ್ನು ಮೊದಲು ಬಳಸಿದನು. [18]ಅಪೊಸ್ತಲರ ಕೃತ್ಯಗಳು 12:17; 21:18; 1 ಕೊರಿಂಥ 15:7; ಗಲಾತ್ಯ 1:19; 2:12; ಯಾಕೋಬ 1:1. [19]ಯಾಕೋಬನು ಸಿಮೋನನೆಂಬ ಇಬ್ರೀಯ ಹೆಸರನ್ನು ಬಳಸಿದನು (ಬಾರ್ನಬ ಪೌಲರು ಮಾಡಿದ ಸಂಗತಿಗಳನ್ನೇ ಯಾಕೋಬನು ತಿಳಿಸಲಿಲ್ಲ). [20]ಯೆಶಾಯ 2:2-4; 49:6; ಮತ್ತು ಮೀಕ 4:1-4, ಪ್ರವಾದನೆಗಳನ್ನು ಯಾಕೋಬನು ಬಳಸಬಹುದಿತ್ತು (ಲೂಕನು ಪ್ರಸಂಗದ ಸಾರಾಂಶವನ್ನು ತಿಳಿಸಿದನು).